## ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಚಿಂಚೋಳಿ

### *ಸಿ.ಸಿ.ನಂ.1126/2025*

**ಫಿರ್ಯಾಧಿದಾರಃ** ಕರ್ನಾಟಕ ಸರ್ಕಾರದ ಪರವಾಗಿ ರಟಕಲ ಪೊಲೀಸ್ ಠಾಣೆ

**// ವಿರುದ್ಧ //**

**ಆರೋಪಿ** : ಈಶ್ವರ

**:ದೋ ಷಾ ರೋ ಪ ಣೆ:**

ನಾನು ಶ್ರೀ **ದತ್ತಕುಮಾರ ಜವಳಕರ. B.B.A. L.L.B (Hons) L.L.M.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಈ ಕೆಳಕಂಡ ಆರೋಪಿ.

| | |
|---|---|
| | ಈಶ್ವರ ತಂದೆ ಕಾಶಿನಾಥ ತಾಂಡೂರ,<br>34 ವರ್ಷ, ವಾಸಃ ನಾವದಗಿ. |

ಆದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಎನೆಂದರೆ,

ದಿನಾಂಕಃ 29-10-2024 ರಂದು ಸಾಯಂಕಾಲ 06-00 ಗಂಟೆ ಸುಮಾರಿಗೆ ರಟಕಲ ಪೊಲಿಸ್ ಠಾಣೆ ವ್ಯಾಪ್ತಿಯ ಚಾಸಾ-1 ಅಶೋಕ ರವರ ತಮ್ಮನಾದ ಕಲ್ಯಾಣಪ್ಪಾ ತನ್ನ ಹೆಂಡತಿಯಾದ ಚಾಸಾ-6 ಪಾರ್ವತಿ ನೇದ್ದವರು ಆರೋಪಿತನ ಮೋಟಾರ ಸೈಕಲ ನಂಬರ KA-32-EH-5029 ನೇದ್ದರ ಮೇಲೆ ಹಿಂದುಗಡೆ ಕುಳಿತುಕೊಂಡು ನಾವದಗಿ ಗ್ರಾಮದಿಂದ ಕೋಡ್ಲಿಗೆ ಹೋಗುವಾಗ ಕೋಡ್ಲಿಯಿಂದ ಚಿಂಚೋಳಿಗೆ ಹೋಗುವ ಮುಖ್ಯ ರಸ್ತೆಯಲ್ಲಿ

ಆರೋಪಿ ನೀನು ತನ್ನ ಮೋಟಾರ ಸೈಕಲನ್ನು ಅತಿ ವೇಗದಿಂದ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಒಮ್ಮೆಲೆ ಬ್ರೇಕ ಹಾಕಿದ್ದರಿಂದ ಹಿಂದೆ ಕುಳಿತ ಕಲ್ಯಾಣಪ್ಪಾ ಮತ್ತು ಚಾಸಾ-6 ರಸ್ತೆಯ ಮೇಲೆ ಬಿದ್ದರಿಂದ ತಲೆಗೆ ಬಲಭಾಗಕ್ಕೆ ಭಾರಿ ರಕ್ತಗಾಯ, ಬಲಗಣ್ಣಿನ ಸುತ್ತ ಭಾರಿ ರಕ್ತಗಾಯವನ್ನುಂಟು ಮಾಡಿ, ಕಲ್ಯಾಣಪ್ಪಾ ಜಂಬಗಿ ನೇದ್ದವರಿಗೆ ಕಲಬುರಗಿ ಆಸ್ಪತ್ರೆಯಲ್ಲಿ ಸೇರಿಕೆ ಮಾಡಿದ್ದು ಉಪಚಾರ ಫಲಕಾರಿ ಯಾಗದೇ ದಿನಾಂಕಃ 07-11-2024 ರಂದು 01-00 ಎ.ಎಂ ಗಂಟೆಗೆ ಮೃತಪಟ್ಟಿರುವ ಕಾರಣ ಕಲಂ 281, 125(ಬಿ), 106 ಭಾರತೀಯ ನ್ಯಾಯ ಸಂಹಿತೆ ಕಾಯ್ದೆ-2023 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

**:ಆರೋಪಿ ಹೇಳಿಕೆ:**

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲಿನ ಆರೋಪಣೆ ಅರ್ಥವಾಯಿತೇ ?
ಉತ್ತರಃ

ಪ್ರಶ್ನೆ-2 ನಿಮ್ಮ ಮೇಲಿನ ಅಪಾದನೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೇ ?
ಉತ್ತರಃ

(ಮೇಲೆ ನಮೂದು ಮಾಡಿದ ಆರೋಪಿ ಹೇಳಿಕೆಯನ್ನು ನನ್ನ ಉಪಸ್ಥಿತಿಯಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯ ಆರೋಪತರು ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

ದಿನಾಂಕಃ 16.10.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
C/c ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.